ಮೈಸೂರು ಬಂದೀಖಾನೆ ಯಲ್ಲಿ ಮೂಲಭೂತ ಸೌಲಭ್ಯ ಒದಗಿಸುವ ಬಗ್ಗೆ

1343 ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬಂದೀಖಾನೆ ಮ್ಯಾನ್ಯುಯಲ್ ಪ್ರಕಾರ ಮೈಸೂರು ಜೈಲಿನಲ್ಲಿ ಇಡಬೇಕಾದ ಖೈದಿಗಳ ಸಂಖ್ಯೆ ಎಷ್ಟು? ಈಗ ಇಲ್ಲಿರುವ ಖೈದಿಗಳ ಸಂಖ್ಯೆ ಎಷ್ಟು?

2) ಕೈದಿಗಳ ಸಂಖ್ಯೆಗೆ ಅನುಗುಣವಾಗಿ ಅಗತ್ಯ ಸಿಬ್ಬಂದಿ ಇದ್ದಾರೆಯೇ?

3) ಇವರುಗಳಿಗೆ ನೀಡಬೇಕಾದ ಮೂಲಭೂತ : ಸೌಲಭ್ಯಗಳನ್ನು ನೀಡಲಾಗುತ್ತಿದೆಯೇ?

4) ಖೈದಿಗಳ ಪರಿಸ್ಥಿತಿ ಉತ್ತಮ ಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)

1) ನಿಯಮಗಳ ಪ್ರಕಾರ 362 ಖೈದಿಗಳಿಗೆ ಸ್ಥಳಾವಕಾಶ ಕಲ್ಪಿಸಿದೆ. ಈಗ ಇಟ್ಟಿರುವ ಖೈದಿಗಳ ಸಂಖ್ಯೆ-959.

2) ಇರುವುದಿಲ್ಲ.

3) ನೀಡಲಾಗುತ್ತಿದೆ.

4) ಖೈದಿಗಳ ಪರಿಸ್ಥಿತಿ ಉತ್ತಮಪಡಿಸಲು ಸರ್ಕಾರವು ಹಲವಾರು ಸುಧಾರಣಾ ಕ್ರಮಗಳನ್ನು ಕೈಗೊಂಡು ಅವುಗಳಲ್ಲಿ ಕೆಲವು ಈ ಕೆಳಕಂಡಂತಿದೆ.

1) ಖೈದಿಗಳಿಗೆ ಒಳ್ಳೆಯ ಗುಣಮಟ್ಟದ ಆಹಾರ ನೀಡಲಾಗುತ್ತಿದೆ.

2) ಜೈಲಿನ ಆಸ್ಪತ್ರೆಗಳಲ್ಲಿ ವೈದ್ಯಕೀಯ ಚಿಕಿತ್ಸಾ ಸೌಲಭ್ಯ ಏರ್ಪಡಿಸಲಾಗಿದೆ.

3) ಖೈದಿಗಳ ಸಂಬಂಧಿಕರು, ಸ್ನೇಹಿತರು, ಹಿತೈಷಿಗಳೊಂದಿಗೆ ಸಂದರ್ಶನಕ್ಕೆ ಅವಕಾಸ ಮಾಡಲಾಗಿದೆ.

4) ಖೈದಿಗಳಿಗೆ ವೃತ್ತಿ ತರಬೇತಿ ನೀಡಲಾಗುತ್ತಿದೆ.

5) ಖೈಗಾರಿಕಾ ಇನ್ನಿತರ ಕೆಲಸ ಕಾರ್ಯಗಳಲ್ಲಿ ಕೆಲಸ ಮಾಡುವ ಬಂಧಿಗಳಿಗೆ ದಿನವೊಂದಕ್ಕೆ 35 ರಿಂದ 45 ರೂ. ಗಳನ್ನು ನೀಡಲಾಗುತ್ತಿದೆ.

6) ಖೈದಿಗಳು ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸಲು ಅನುಕೂಲ ಮಾಡಿಕೊಡಲಾಗಿದೆ.

ಶ್ರೀ ಎ. ಎಸ್. ಗುರುಸ್ವಾಮಿ: ಅಧ್ಯಕ್ಷರೆ, ಮೈಸೂರು ಜೈಲಿನ ಅಡ್ವೈಸರಿ ಕಮಿಟಿ ಛೇರ್ಮನ್ ಆಗಿ ನಾನು ಸುಮಾರು ವರ್ಷ ಕೆಲಸ ಮಾಡಿದ್ದೇನೆ. ಅಲ್ಲಿನ ಕೆಲವು ಅಂಶಗಳು ಬಗ್ಗೆ ನನಗೆ ಗೊತ್ತಿವೆ. ಆ ಜೈಲಿನಲ್ಲಿ 362 ಜನ ಇರತಕ್ಕಂಥಹ ಖೈದಿಗಳ ಪ್ರದೇಶದಲ್ಲಿ ಈಗ 959 ಜನ ಖೈದಿಗಳು ಇದ್ದಾರೆ.

ಆದರೆ ಅಲ್ಲಿರುವ ಖೈದಿಗಳಿಗೆ ಸವಲತ್ತು ಏನೂ ಒದಗಿಸಿಲ್ಲವೆಂದು ಹೇಳಿದ್ದಾರೆ. ಅದರ ಅರ್ಥ ಕಾಂಟ್ರಕ್ಟರ್ ಅಲ್ಲವೆ. ಖೈದಿಗಳ ಸಂಖ್ಯೆಗೆ ಅಗತ್ಯವಾಗಿ ಎಷ್ಟು ಜನ ಸಿಬ್ಬಂದಿ ಇದ್ದಾರೆ, ಎಷ್ಟು ಜನ ಇರಬೇಕಾಗಿತ್ತು, ಅದಕ್ಕೆ ಉತ್ತರ ಇಲ್ಲ. ಖೈದಿಗಳಿಗೆ ಏನೇನು ಸೌಲಭ್ಯ ಕೊಟ್ಟಿದ್ದಾರೆಂದು ಕರೆಕ್ಷನಲ್ ಮೋಟಿವೇಷನ್ ಬಗ್ಗೆ ಖೈದಿಗಳಿಗೆ ಏನು ಕ್ರಮ ತೆಗೆದುಕೊಂಡಿದ್ದಾರೆ ಅದರ ಬಗ್ಗೆ ಏನೂ ವಿಚಾರ ಹೇಳುವುದಿಲ್ಲ. ಖೈದಿಗಳ ಮಕ್ಕಳು ಹೊರಗಡೆ ಏನಿದ್ದಾರೆ ಅವರ ಬಗ್ಗೆ ಅವರು ಏನು ರಿಫಾರ್ಮೇಷನ್ ಮಾಡಿದ್ದಾರೆ ಸಂಬಂದ ಬಗ್ಗೆ ಕೂಡ ಹೇಳುವುದಿಲ್ಲ. ಮುಲ್ಲಾ ಕಮಿಷನ್ ಏನು ಜೈಲು ರಿಫಾರ್ಮೇಷನ್ ಆಗಬೇಕೆಂದು ಸಲಹೆ ಕೊಟ್ಟಿದೆ ಇದನ್ನು ಜಾರಿಗೆ ತರುವುದಕ್ಕೆ 1985ರಲಲಿ ಒಂದು ಕಮಿಟಿಯನ್ನು ನಿರ್ಮಿಸಲಾಗಿತ್ತು, ಆ ಕಮಿಟಿಯವರು ಏನೇನು ರಿಫಾರ್ಮೇಷನ್ ತಂದಿದ್ದಾರೆ, ಎಷ್ಟು ಖರ್ಚು ಮಾಡಿದ್ದಾರೆ, ಎಷ್ಟು ಜೈಲಿನಲ್ಲಿ ಮುಲ್ಲಾ ಕಮಿಷನ್ ಪ್ರಕಾರ ಅಭಿವೃದ್ಧಿ ಮಾಡಲಾಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಅವರು ಕೇಳಿದ ಪ್ರಶ್ನೆಗೆ ನಾನು ಉತ್ತರ ಕೊಟ್ಟಿದ್ದೇನೆ. ಅಲ್ಲಿರತಕ್ಕಂಥಹ ಜೈಲುಗಳು 362 ಇದ್ದರೆ, ಇವತ್ತು ಅಲ್ಲಿರತಕ್ಕಂತಹವರು 959 ಜನ ಖೈದಿಗಳು. ಆದರೆ ಈ ಒಂದು ಆಕಾಮಡೇಷನ್‌ನಲ್ಲಿ ಹೆಚ್ಚಿನ ರೀತಿಯಲ್ಲಿ ಮಾಡಬೇಕಾದರೆ ನಾವು ಅಡಿಷನಲ್ ಕೆಲವು ಬ್ಯಾರಕ್ ಕಟ್ಟಬೇಕಾಗಿದೆ. ಅದಕ್ಕೆ ಅಲ್ಲಿ ಅಡಿಷನಲ್ ಬ್ಯಾರಕ್ ಕಟ್ಟುವುದಕ್ಕೆ ಈ ವರ್ಷದ ಹಣದಲ್ಲಿ ಸುಮಾರು ಕೇಂದ್ರ ಸರ್ಕಾರದ 11ನೇ ಹಣಕಾಸು ಆಯೋಗದ ಪ್ರಕಾರ 3 ಕೋಟಿ ರೂಪಾಯಿ ಬಂದಿದಾನೆ ಇಲಾಖೆಗೆ ಅಲಾಟ್‌ಮೆಂಟ್ ಆಗಿದೆ. ಅದರಲ್ಲಿ ಒಂದು ಬ್ಯಾರಕ್ ಕಟ್ಟತಕ್ಕಂತಹ ಪ್ರಯತ್ನ ಮಾಡಿ ಇದು ಏನು ಕಂಜೆಷನ್ ಆಗಿದೆ ಇದನ್ನು ಸರಿಪಡಿಸುವ ಕೆಲಸ ಮಾಡುತ್ತೇವೆ. ಎರಡನೆಯದು ಮುಲ್ಲಾ ಕಮಿಷನ್ ರಿಪೋರ್ಟ್ ಬಗ್ಗೆ ಹೇಳಿದ್ದಾರೆ, 1970 ರಲ್ಲಿ ಈ ಕಮೀಷನ್ ವರದಿಯನ್ನು ಕೊಟ್ಟಿದೆ. ಆ ವರದಿ ಆಧಾರದ ಮೇಲೆ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಸುಮಾರು 75 ಕೋಟಿ ಯೋಜನೆಯನ್ನು ಈಗಾಗಲೇ ಆರ್ಥಿಕ ಇಲಾಖೆಗೆ ನಾವು ಕಳುಹಿಸಿದ್ದೇವೆ. 75 ಕೋಟಿ ರೂಪಾಯಿ ಖರ್ಚು ಮಾಡಿದರೆ ಅನೇಕ ಜೈಲುಗಳಲ್ಲಿ ಕೇವಲ ಮೈಸೂರು ಒಂದೇ ಅಲ್ಲ, ಸೆಂಟ್ರಲ್ ಜೈಲ್ ಮತ್ತು ಬೇರೆ ಬೇರೆ ಜಿಲ್ಲೆಗಳಲ್ಲಿರತಕ್ಕಂತ ಮತ್ತು ತಾಲ್ಲೂಕು ಮಟ್ಟದಲ್ಲಿರತಕ್ಕಂತಹ ಕೆಲವು ಜೈಲುಗಳನ್ನು ಕೂಡ ಇಂಪ್ರೂವ್ ಮಾಡುವುದಕ್ಕೆ ಸಾಧ್ಯ ಇದೆ. ರಿಪೇರಿ ಮಾಡತಕ್ಕಂಥಹದ್ದಕ್ಕೆ, ಹೊಸ ಕಟ್ಟಡಗಳು ಬರತಕ್ಕಂಥಹ ಸಾಧ್ಯತೆ ಇದೆ. ಆ 75 ಕೋಟಿ ರೂಪಾಯಿ ಯೋಜನೆ ಏನಿದೆ ಆ ಲೇಟೆಸ್ಟ್ ಅಪ್ರೂವ್ ಆದರೆ ಖಂಡಿತವಾಗಿ ನಾವು ಏನಾದರೂ ಕಾರ್ಯಕ್ರಮ ಹಾಕಿಕೊಳ್ಳಬಹುದಕ್ಕೆ ಬರುತ್ತದೆ. ಇಲ್ಲದಿದ್ದರೆ ನಮ್ಮದೇ ಹಣದಿಂದ ಮಾಡಬೇಕಾದರೆ ನಿಧಾನವಾಗುತ್ತದೆ. ಉಳಿದ ಇಂಪ್ರೂವ್‌ಮೆಂಟ್ ಬಗ್ಗೆ ಈಗಾಗಲೇ ಸ್ಪ್ಯಾಂಡರ್ಡ್ ಪ್ರಿಸನ್ಸ್ ಮ್ಯಾನ್ಯುಯಲ್‌ನಲ್ಲಿ ಯಾವ ರೀತಿಯಾಗಿ ಅವರಿಗೆ ಊಟ ಕೊಡಬೇಕು, ಮೆಡಿಕಲ್ ಟ್ರೀಟ್‌ಮೆಂಟ್ ಮತ್ತು ಬೇರೆ ಬೇರೆ ಅವರಿಗೆ ಕೆಲಸ ಕೊಡುವುದಕ್ಕೆ ವೊಕೇಷನಲ್ ಟ್ರೈನಿಂಗ್ ಕೊಡುವುದಕ್ಕೆ ಸಾಧ್ಯ ಇದೆ ಅದನ್ನೆಲ್ಲ ನಾವು ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಎಷ್ಟರ ಮಟ್ಟಿಗೆ ಅವರು ಅಪೇಕ್ಷೆ ಪಟ್ಟಿದ್ದಾರೆ ಅಷ್ಟರ ಮಟ್ಟಿಗೆ ಆಗದೆ ಇರಬಹುದು, ಏಕೆಂದರೆ ಅವರು ಈಗಾಗಲೇ ಪ್ರಸನ್ಸ್ ಕನ್ಸಲ್‌ಟೀವ್ ಕಮಿಟಿ ಛೇರ್ಮನ್ ಆಗಿ 10 ವರ್ಷ ಕೆಲಸ ಮಾಡಿದ್ದಾರೆ ಅವರಿಗೆ ಚೂಸ್ತಿ ಅನುಭವ ಇದೆ. ಖಂಡಿತವಾಗಿ ಅವರ ಜೊತೆ ಚರ್ಚೆ ಮಾಡಿ ಆ ಅನುಭವದ ಆಧಾರದ ಮೇಲೆ ಮುಂದೆ ಏನು ಕ್ರಮ ಜರುಗಿಸಬೇಕೆಂದು ತಿಳಿದುಕೊಂಡು ಹೆಜ್ಜೆ ಇಡುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳೂ ತಮ್ಮ ಉತ್ತರದಲ್ಲಿ ಖೈದಿಗಳ ಸಂಖ್ಯೆಗೆ ಅನುಗುಣವಾಗಿ ಅಗತ್ಯ ಸಿಬ್ಬಂದಿ ಇರುವುದಿಲ್ಲವೆಂದು ಒಪ್ಪಿದ್ದಾರೆ. ಇತ್ತೀಚೆಗೆ ಬಂದೀಖಾನೆ ಇಲಾಖೆಗೆ ಸಿಬ್ಬಂದಿಗಳನ್ನು ನೇಮಕ ಮಾಡತಕ್ಕಂತಹ ಪಟ್ಟಿಯನ್ನು ರದ್ದು ಮಾಡಲಿಕ್ಕೆ ಕಾರಣವೇನು, ಹಣಕಾಸಿನ ಕೊರತೆ ಏನಾದರೂ ಕಾರಣವಾ? ಏಕೆ ತಡೆಹಿಡಿದಿದ್ದಾರೆ, ಸಿಬ್ಬಂದಿಯನ್ನು ಆಯ್ಕೆ ಮಾಡುವುದರಲ್ಲಿ ಏನಾದರೂ ಅಕ್ರಮ ನಡೆದಿದೆಯೇ ನಡೆದಿದ್ದರೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಆ ಪಟ್ಟಿಯನ್ನು ತಕ್ಷಣ ಸರ್ಕಾರ ಒಪ್ಪಿಕೊಂಡು ಅವರುಗಳನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಕೇಳುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅದರಲ್ಲಿ ಅಕ್ರಮ ನಡೆದಿದೆ ಎಂದು ನಮಗೆ ದೂರು ಬಂದಿಲ್ಲ. ಆದರೆ ನಾವು ಅಲ್ಲಿ ಬಂಧೀಖಾನೆ ಇಲಾಖೆಯವರು ಕೇಳಿದ್ದು ಸುಮಾರು 330 ಸಿಬ್ಬಂದಿಗೆ ರಿಕ್ಯುಟ್ ಮಾಡಬೇಕೆಂದು ಕೇಳಿದ್ದರು. ಆದರೆ ಆರ್ಥಿಕ ಇಲಾಖೆಯವರು ಈ ವರ್ಷ ಅರ್ಧ ಮತ್ತೆ ಮುಂದಿನ ವರ್ಷ ಅರ್ಧ ನೇಮಕ ಮಾಡಿ ಎಂದು ಅಭಿಪ್ರಾಯ ಕೊಟ್ಟಿದ್ದರು. ಅದಕ್ಕೆ ನಾವು ಎರಡೂ ಸೇರಿ 330ಕ್ಕೆ ನೀವು ಅನುಕೂಲ ಮಾಡಿಕೊಡಬೇಕು ಏಕೆಂದರೆ ಸಾಕಷ್ಟು ವೇಕೆನ್ಸಿ ಇವೆ ಅದರಿಂದ ನಮಗೆ ತೊಂದರೆಯಾಗುತ್ತಿದೆ. ಅದಕ್ಕೆ ದಯವಿಟ್ಟು 330 ಸಿಬ್ಬಂದಿಯನ್ನು ರಿಕ್ಯೂಟ್ ಮಾಡಲು ಒಪ್ಪಬೇಕೆಂದು ಕೇಳಿದ್ದೇವೆ. ಈಗಾಗಲೇ ಅವರು 186 ಕ್ಕೆ ಅನುಮತಿ ಕೊಟ್ಟಿದ್ದಾರೆ. ಉಳಿದ 170 - 80 ಏನು ಉಳಿದಿವೆ ಅದಕ್ಕೂ ಕೂಡ ಅನುಮತಿ ಕೊಡುತ್ತೇವೆಂದು ಹೇಳಿದ್ದಾರೆ. ಅದಕ್ಕಾಗಿ ಎರಡೂ ಕೂಡ ಅನುಮತಿ ಬಂದ ಮೇಲೆ ನಾವು ಏನು ರಿಕ್ಯುಟ್‌ಮೆಂಟ್ ಮಾಡಬೇಕು ಮಾಡಿ ಅವರಿಗೆ ಆರ್ಡರ್ ಇಶ್ಯೂ ಮಾಡುತ್ತೇವೆ.

ಶ್ರೀ ಎ.ಎನ್. ಗುರುಸ್ವಾಮಿ : ಮಾನ್ಯ ಅಧ್ಯಕ್ಷರೆ, ಖೈದಿಗಳ ರಿಫಾರ್ಮೇಷನ್ ಮಾಡುವುದರ ಬಗ್ಗೆ ಮಾನ್ಯ ಮಂತ್ರಿಗಳು ಕರೆಕ್ಷನಲ್ ಮೋಟಿವೇಷನ್ ಪೋರ್ಸಸ್ ಅನ್ನು ಎಲ್ಲಿ ಇಂಟ್ರಡ್ಯೂಸ್ ಮಾಡಿದ್ದಾರೆಂದು ಕೇಳಿದರೆ ಅದರ ಬಗ್ಗೆ ಉತ್ತರ ಇಲ್ಲ. ಖೈದಿಗಳ ಮಕ್ಕಳು ಏನಿದ್ದಾರೆ ಅವರು ರಸ್ತೆಯಲ್ಲಿದ್ದಾರೆ. ಕ್ರಿಮಿನಲ್‌ಗಳಾಗುತ್ತಿದ್ದಾರೆ. ಅವರ ರಿಫಾರ್ಮೇಷನ್‌ಗೆ ರಿಹ್ಯಾಬಿಲಿಟೇಷನ್‌ಗೆ ಏನು ಕಾರ್ಯಕ್ರಮ ಮೈಸೂರು ಜಿಲ್ಲೆಗಳಲ್ಲಿ ಕೈಗೊಂಡಿದ್ದೀರಿ ಎಂದು ಕೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಮುಲ್ಲಾ ಕಮಿಷನ್ ಪ್ರಕಾರ ಎಷ್ಟು ಹಣ ಖರ್ಚು ಮಾಡಿದ್ದೀರ ಎಂಬುದರ ಬಗ್ಗೆ ಅಂಕಿ ಅಂಶ ಕೊಡಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮುಲ್ಲಾ ಕಮಿಷನ್ ವರದಿ ಒಂದು ಕಡೆ ಉಳಿಯಿತು, ಇದ್ದ ಸಿಬ್ಬಂದಿ ಭರ್ತಿ ಮಾಡುವುದಕ್ಕೆ ನಮಗೆ ಅವಕಾಶ ಸಿಕ್ಕಿಲ್ಲ, ಈಗ ಅವಕಾಶ ಸಿಕ್ಕಿದೆ ಕೊರತೆ ಇರತಕ್ಕಂತಹ ಸಿಬ್ಬಂದಿಗಳಿಗೆ ಭರ್ತಿ ಮಾಡಿ ಆದಷ್ಟು ಪ್ರತಿಯೊಂದು ಜಿಲ್ಲೆಯ ಜೈಲುಗಳನ್ನು ವಾರ್ಡನ್‌ಗಳನ್ನು ಅಪಾಯಿಂಟ್ ಮಾಡತಕ್ಕಂತಹ ಮೊದಲ ಕೆಲಸ ಮಾಡುತ್ತೇವೆ. ಮುಲ್ಲಾ ಕಮಿಟಿ ರಿಪೋರ್ಟ್‌ನ ಪ್ರಕಾರ ನಾನು ಈಗಾಗಲೇ ಹೇಳಿದೆ. 75 ಕೋಟಿ ರೂಪಾಯಿ ಯೋಜನೆ ನಾವು ರೂಪಿಸಿ ಆರ್ಥಿಕ ಇಲಾಖೆಗೆ ಕಳುಹಿಸಿದ್ದೇವೆ. ತಮಗೆಲ್ಲಾ ಗೊತ್ತಿದೆ. ಆರ್ಥಿಕ ಇಲಾಖೆಯವರು ಅವಶ್ಯಕತೆ ನೋಡಿ ಅನುಮತಿ ಕೊಡುತ್ತೇವೆಂದು ಹೇಳಿದ್ದಾರೆ. ಅದಕ್ಕೆ ಒಪ್ಪಿಗೆ ಬಂದರೆ ಕೆಲವು ಇಂಪ್ರೂವ್‌ಮೆಂಟ್ಸ್ ಅನ್ನು ನಾವು ಮಾಡಬಹುದು. ಇಲ್ಲದೆ ಇದ್ದರೆ ಅದನ್ನು ನಾವು ಹಂತಹಂತವಾಗಿ ಮಾಡುವ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆ. ಖೈದಿಗಳ ಮಕ್ಕಳಿಗೆ ಏನು ಮಾಡುತ್ತಿದ್ದೀರಿ ಎಂದು ಪ್ರಶ್ನೆ ಕೇಳಿದ್ದಾರೆ. ಅದರ ಬಗ್ಗೆ ನನಗೆ ಬಳಿ ಈಗ ಸಂಪೂರ್ಣ ಮಾಹಿತಿ ಇಲ್ಲ. ಆ ಮಾಹಿತಿಯನ್ನು ತರಿಸಿ ಕೊಡುತ್ತೇನೆ.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೆ, ಇಂಪ್ರೂವ್‌ಮೆಂಟ್ ಸಲುವಾಗಿ 75 ಕೋಟಿ ರೂಪಾಯಿಯ ಒಂದು ಯೋಜನೆ ಇದೆಯೆಂದು ಮಾನ್ಯ ಸಚಿವರು ಹೇಳಿದ್ದಾರೆ, ಅದನ್ನು ಸ್ವಾಗತ ಮಾಡುತ್ತೇವೆ. ಆದರೆ ಮೈಸೂರು ಜೈಲಿನಲ್ಲಿರುವಂತಹ ಸ್ಥಳವಾಕಾಶ ಬಹಳ ಕಡಿಮೆ ಇದೆ. ಈಗ ಇರುವಂತಹ ವ್ಯವಸ್ಥೆಯೊಳಗೆ ಆಗಾಗ ಖೈದಿಗಳ ಮಧ್ಯೆ ಹೊಡೆದಾಟವಾಗಿ ಅಲ್ಲಿಂದ ತಪ್ಪಿಸಿಕೊಳ್ಳುವಂತಹ ಸಂದರ್ಭ ಅಲ್ಲಿ ಹೆಚ್ಚು ಜನ ಖೈದಿಗಳಿಂದ ಕಾರಣದಿಂದ ಉಂಟಾಗಿದೆ. ಆದೆ ಈಗಿರುವಂತಹ ಆ ಪ್ರದೇಶದ ಜೈಲಿನ ಸ್ಥಳದಲ್ಲಿ ಒಳಗಡೆ ಯಾವುದೇ ಇಂಪ್ರೂವ್‌ಮೆಂಟ್ ಮಾಡುವುದಕ್ಕೆ ಪ್ರಾವಿಜನ್ ಇಲ್ಲದೆ ಇರುವುದರಿಂದ, ನಮ್ಮಲ್ಲೂ ಕೂಡ ಬಯಲು ಬಂಧೀಖಾನೆ ಕಲ್ಪನೆ ಏನು ಕೊಟ್ಟಿದ್ದೀರಿ, ಆ ದೃಷ್ಟಿಯಿಂದ ಒಂದು ಹೊಸ ಜಾಗದಲ್ಲಿ ಅದನ್ನು ಮಾಡಿದರೆ ಒಳ್ಳೆಯದಾಗಬಹುದು. ಏಕೆಂದರೆ ಈ ಯೋಜನೆ ಬಹಳ ಒಳ್ಳೆಯ ಯೋಜನೆ. ಹಣ ಏನು ಕೊಡುವಂತಹ ವಿಚಾರ ಇದೆ ಅದನ್ನು ಅದಕ್ಕೆ ಉಪಯೋಗಿಸಬೇಕು. ಆದರೆ ಈಗಿರುವ ಸ್ಥಳದಲ್ಲಿ ಇಂಪ್ರೂವ್‌ಮೆಂಟ್ ಮಾಡುವುದು ಬಹಳ ಕಷ್ಟವಿದೆ. ಇದರ ಬಗ್ಗೆ ಸನ್ಮಾನ್ಯ ಮಂತ್ರಿಗಳು ಆಲೋಚನೆ ಮಾಡಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾನು ಈಗಾಗಲೇ ಹೇಳಿದಂತೆ 11ನೇ ಫೈನಾನ್ಸ್ ಕಮಿಷನ್ ಪ್ರಕಾರ ನಮ್ಮ ಸರ್ಕಾರಕ್ಕೆ ಮೂರು ಕೋಟಿ ರೂಪಾಯಿ ಕೇಂದ್ರ ಸರ್ಕಾರ ಒದಗಿಸುವ ಯೋಚನೆ ಇದೆ. ಆ ಮೂರು ಕೋಟಿ ರೂಪಾಯಿಯಲ್ಲಿ ನಾವು ಇಡೀ ರಾಜ್ಯದಲ್ಲಿ ಇರತಕ್ಕಂಥ ಜೈಲುಗಳನ್ನು ಸುಧಾರಣೆ ಮಾಡಬೇಕಾಗುತ್ತದೆ. ಅದರಲ್ಲೂ ಮೈಸೂರು ಜೈಲಿನಲ್ಲಿ ಸ್ಥಳಾವಕಾಶದ ಕೊರತೆ ಇದೆ ಎಂದು ನಮ್ಮ ಗಮನಕ್ಕೆ ಬಂದಿದೆ. ಮತ್ತು ಕಾರಣಾಂತರದಿಂದ ಇವತ್ತು ಜೈಲಿನಲ್ಲಿ ಅಂಡರ್‌ಟ್ರಯಲ್ಸ್ ಜಾಸ್ತಿ ಇದ್ದಾರೆ. ಆದುದರಿಂದ ಅಲ್ಲಿ ಗಲಾಟೆ ಆಗುವ ಸಾಧ್ಯತೆ ಇದೆ. ಸದ್ಯಕ್ಕೆ ಅಲ್ಲಿ ಒಂದು ಬೇರೆ ಜೈಲನ್ನು ಕಟ್ಟಿಸಿ ಅಲ್ಲಿ ಅಕಾಮಡೇಟ್ ಮಾಡಿಕೊಡಬೇಕು; ಮುಂದೆ ಬೇಕಾದರೆ ಬಯಲು ಬಂಧೀಖಾನೆಯ ಕಲ್ಪನೆ ಏನಿದೆ, ಈಗಾಗಲೇ ಬೆಂಗಳೂರಿನಲ್ಲಿ ಅದನ್ನು ಮಾಡಿಕೊಟ್ಟಿದ್ದೇವೆ. ಯಾರು ಲಾಂಗ್ ಟೈಮ್ ಲೈಫ್ ಕನ್‌ವಿಕ್ಷನ್ ಸೇದಿ ಇರುತ್ತಾರೆ ಅಂತಹವರಿಗೆ ಮಾತ್ರ ಅಲ್ಲಿ. ಅದು ಉಪಯೋಗಕ್ಕೆ ಬರುತ್ತದೆ. ಹೊರತು ಅಂಡರ್‌ಟ್ರಯಲ್ಸ್‌ಗೆ ಬರುವುದಿಲ್ಲ. ಏಕೆಂದರೆ ಇವತ್ತು ಹೆಚ್ಚಿಗೆ ಇರುವಂತಹವರು ಅಂಡರ್ ಟ್ರಯಲ್ಸ್. ಆದುದರಿಂದ ಆ ಒಂದು ಬಯಲು ಬಂಧೀಖಾನೆ ಕಲ್ಪನೆ ಬಗ್ಗೆ ಏನು ಹೇಳಿದ್ದೀರಿ ಅದಕ್ಕೆ ಅಲ್ಲಿ ಸಾಧ್ಯತೆ ಇದ್ದರೆ ಮತ್ತು ಹಣದ ಲಭ್ಯತೆ ಆದಾಗ ಅದರ ಬಗ್ಗೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಮಾನ್ಯ ಅಧ್ಯಕ್ಷರೆ, ಒಂದು ಪ್ರಶ್ನೆ ಹೇಳುತ್ತೇನೆ. ಮಾನ್ಯ ಸಚಿವರು ಹೇಳಿದರು 959 ಮಂದಿ ಕೈದಿಗಳು ಜೈಲಿನಲ್ಲಿದ್ದಾರೆ ಎಂದು. ಅದರಲ್ಲೆ ಕನ್‌ವಿಕ್ಷನ್ ಆಗಿರುವವರು ಎಷ್ಟು? ಅಂಡರ್‌ಟ್ರಯಲ್ಸ್ ಎಷ್ಟು? ಶಿಕ್ಷೆ ಆಗದೇ ಇರುವವರು ಎಷ್ಟು ಜನ ಇದ್ದಾರೆ? ಮತ್ತು ಏಕೆ ನಿಧಾನವಾಗಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಟ್ರಯಲ್ ನಿಧಾನ ಏಕೆ ಆಗಿದೆ ಎನ್ನುವುದಕ್ಕೆ ಕೋರ್ಟ್ ಹೇಳಬೇಕು. ನಮ್ಮಿಂದ ಅದನ್ನು ಹೇಳುವುದಕ್ಕೆ ಆಗುವುದಿಲ್ಲ. ಆದರೆ ಸಜಾ ಆಗಿ ಬಂದಿರುವವರು 270 ಮಂದಿ. ವಿಚಾರಣಾ ಬಂಧಿಗಳು 563 ಮಂದಿ ಹಾಗೂ ಇತರೆ ಬಂಧಿಗಳು 57 ಇದ್ದಾರೆ. ಒಟ್ಟು 890 ಕೈದಿಗಳು ಇದ್ದಾರೆ. ಅದರ ವಿವರ ತಾವು ಕೇಳಿದ್ದೀರಿ, ಕೊಟ್ಟಿದ್ದೇನೆ.